ಜಿ.ವಿ. ಆನಂದಮೂರ್ತಿ

## ಬಿ.ಎಲ್. ವೇಣು ಅವರ 'ದುರ್ಗದ ಬೇಡರ್ದಂಗೆ'

# ರಾಜಕೀಯ–ಸಾಂಸ್ಕೃತಿಕ ವಿಮೋಚನೆಯ ಕಾದಂಬರಿ

ಕನ್ನಡ ಕಾದಂಬರಿ ಪರಂಪರೆಗೆ ಜನಪ್ರಿಯ ಕಾದಂಬರಿಕಾರ ಬಿ.ಎಲ್. ವೇಣು ಅವರಂತಹ ಲೇಖಕರ ಕೊಡುಗೆಗಳು ಸಾಕಷ್ಟಿವೆ ಎಂಬುದನ್ನು ಚರಿತ್ರೆ ನಮಗೆ ಹೇಳುತ್ತದೆ. ಮೊದಲನೆಯದಾಗಿ 'ಜನಪ್ರಿಯ', 'ಜನಪ್ರಿಯತೆ' ಎನ್ನುವುದು ದೋಷಯುಕ್ತ ನುಡಿಯಲ್ಲ. ಅದೊಂದು ಗುಣಾತ್ಮಕ ಪದ. ಹೇಗೆಂದರೆ, ಈ ಬಗೆಯ ಲೇಖಕರು ತಮ್ಮ ಓದುಗರನ್ನು ಸೃಷ್ಟಿಸಿಕೊಳ್ಳುತ್ತಾ ಜೊತೆಗೆ ತಮ್ಮ ಸೃಜನಶೀಲ ಬರವಣಿಗೆಯನ್ನು ಸೂಕ್ಷ್ಮಗೊಳಿಸಿಕೊಳ್ಳುತ್ತಾ, ಮತ್ತು ಓದುಗರ ಅಭಿರುಚಿಯನ್ನು ಉನ್ನತೀಕರಿಸುತ್ತಾರೆ. ಇದು ಈ ಬರಹಗಾರರ ದೊಡ್ಡ ಕೊಡುಗೆ. ಈ ಪರಂಪರೆಯ ಮುಂದುವರಿಕೆ ಬಿ.ಎಲ್. ವೇಣು.

ಭಾರತದಲ್ಲಿ ಈಗಿನ ಮಟ್ಟಿಗೆ ಬಹಳ ಅಪಾಯಕಾರಿ ಕೆಲಸವೆಂದರೆ, ಚರಿತ್ರೆಯನ್ನು ಕೆದಕುವುದು. ಇದು ಈಗಿರುವ ಗಾಯಗಳ ಜೊತೆಗೆ ಇನ್ನಷ್ಟು ಹೊಸ ಗಾಯಗಳನ್ನು ಮೈಮೇಲೆ ಅನಗತ್ಯವಾಗಿ ಸೃಷ್ಟಿಸಿಕೊಂಡಂತೆ! ಚರಿತ್ರೆಯಿಂದ ಪಾಠ ಕಲಿಯಬೇಕಾದ ನಾವು, ಚರಿತ್ರೆಯಿಂದಲೇ ಇನ್ನಷ್ಟು ಹಿಂಸೆಗೆ, ವಿಭಜನೆಗೆ ಒಳಗಾಗುತ್ತಿರುವುದು ದುಃಖಕರ ಸಂಗತಿ.

ವೇಣು ಅವರಿಗೆ ಇತಿಹಾಸವೆನ್ನುವುದು ಬರಿ ದಾಖಲೆಗಳಲ್ಲ. ಅದನ್ನು ಮೀರಿ ವರ್ತಮಾನ ಸಮಾಜದೊಂದಿಗೆ ಮುಖಾಮುಖಿಯಾಗುವುದರಲ್ಲೇ ಅವರ ಬರವಣಿಗೆಯ ಶಕ್ತಿ ಅಡಗಿರುವುದು. ಹಾಗೆಯೇ ವೇಣು ಅವರಿಗೆ ಗತ ಎನ್ನುವುದು ವೈಭವೀಕರಣದ ಸರಕಲ್ಲ. 'ಇತ್ತುಗಳ ಧ್ವಜವ ಹಿಡಿದೆತ್ತುವುದು...' ಕೂಡ ಅವರ ಕೆಲಸವಲ್ಲ. ಅದು ಮಾನವೀಯ ಸಂಬಂಧಗಳನ್ನು ಬೆಸೆಯುವ, ಜನಸಾಮಾನ್ಯರ ಕಲ್ಯಾಣವನ್ನು ಬಯಸುವ ಆಶಯವೂ ಇವರ ಚಾರಿತ್ರಿಕ ಕಾದಂಬರಿಗಳಲ್ಲಿ ಧ್ವನಿತವಾಗುತ್ತದೆ. 'ಇತಿಹಾಸದಲ್ಲಿರುವುದನ್ನೇ ದಾಖಲಿಸುವುದಾದರೆ ನಾವೇಕೆ ವೃಥಾ ಕಾದಂಬರಿ ಬರೆಯಬೇಕು? ಇತಿಹಾಸವೇ ಸಾಕಲ್ಲ?' (ರಾಜಾ ಮತ್ತಿ ತಿಮ್ಮಣ್ಣನಾಯಕ. ಪು. 7 : ಲೇಖಕರ ಮಾತು) ಇದು ವೇಣು ಅವರಿಗಿರುವ ಚರಿತ್ರೆಯ ಬಗೆಗಿನ ನಿಲುವು. ಹೀಗಾಗಿ, ಇವರ ಚಾರಿತ್ರಿಕ ಕಾದಂಬರಿಗಳು ಕೇವಲ ಇತಿಹಾಸವನ್ನು ಕಟ್ಟಿಕೊಡುವುದಿಲ್ಲ. ಅದರಾಚೆಗೆ ಯಾವ ಅತಿರೇಕಕ್ಕೂ ಹೋಗದೆ, ವಾಸ್ತವದ ನೆಲೆಯಲ್ಲಿ ವರ್ತಮಾನವನ್ನು ಕಟ್ಟಿಕೊಡುವ ಕೃತಿಗಳಾಗಿವೆ. ಇದು ವೇಣು